# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 640(647) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.09.2022 |
| ಉತ್ತರಿಸಬೇಕಾದ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಹೊಸ ಶಿಕ್ಷಣ ನೀತಿ 2020 ಜಾರಿಯಲ್ಲಿದೆಯೇ; ಜಾರಿಯಲ್ಲಿದ್ದಲ್ಲಿ, ಯಾವ ಯಾವ ಹಂತದಲ್ಲಿ ಜಾರಿಯಲ್ಲಿದೆ; ಹೊಸ ಶಿಕ್ಷಣ ನೀತಿ ಜಾರಿ ಮಾಡುವ ಪ್ರಕ್ರಿಯೆಯ ರೂಪು ರೇಷಗಳೇನು; (ವಿವರ ನೀಡುವುದು) | ಹೌದು,<br>ರಾಜ್ಯದಲ್ಲಿ ಪ್ರಸ್ತುತ ಹೊಸ ಶಿಕ್ಷಣ ನೀತಿ 2020ನ್ನು ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಹಂತದಲ್ಲಿ ಜಾರಿಗೊಳಿಸಲಾಗುತ್ತಿದೆ.<br>ಶ್ರೀ ಎಸ್.ವಿ. ರಂಗನಾಥ್ ರವರ ಅಧ್ಯಕ್ಷತೆಯಲ್ಲಿ ರಚಿಸಿದ ಕಾರ್ಯಪಡೆಯ ವರದಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನದ ಕುರಿತಂತೆ ಶಾಲಾ ಹಂತದ ರೂಪುರೇಷೆಗಳನ್ನು ನೀಡಿದ್ದು, ಅನುಬಂಧದಲ್ಲಿರಿಸಿದೆ. |
| ಆ) | ಹೊಸ ಶಿಕ್ಷಣ ನೀತಿಯ ಅನುಷ್ಠಾನದಿಂದಾಗಿ ಈಗ ಇರುವ ಪೂರ್ವ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಪಿಯುಸಿ, ಪದವಿ ಮತ್ತು ಇನ್ನುಳಿದ ಶಿಕ್ಷಣ ವ್ಯವಸ್ಥೆಯ ಮೇಲೆ ಆಗುವ ಪರಿಣಾಮಗಳೇನು; ಒಟ್ಟು ಶಿಕ್ಷಣ ವ್ಯವಸ್ಥೆಯನ್ನು ಹೊಸ ಶಿಕ್ಷಣ ನೀತಿಗೆ ಅಳವಡಿಸಲು ಪೂರಕವಾಗಿ ಪೂರ್ವಸಿದ್ಧತೆ ಮಾಡಲಾಗಿದೆಯೇ; (ವಿವರ ಒದಗಿಸುವುದು) | ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ 3 ವರ್ಷದ ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ತರಗತಿಗಳು 1 ಮತ್ತು 2 ಬುನಾದಿಹಂತ: ತರಗತಿಗಳು 3 ರಿಂದ 5 ಸಿದ್ದತಾ ಹಂತ: 6 ರಿಂದ 7 ಮಾದ್ಯಮಿಕ ಹಂತ: 9 ರಿಂದ 12 ಪ್ರೌಢ ಹಂತ ಎಂದು ಗುರುತಿಸಲಾಗಿದೆ.<br>ಹೊಸ 5+3+3+4 ರಚನೆಯಲ್ಲಿ, 3ನೇ ವಯಸ್ಸಿನಿಂದ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ಸುಭದ್ರ ತಳಹದಿಯೂ (ECCE) ಸಹ ಸೇರಿದ್ದು, ಇದು ಮಕ್ಕಳಲ್ಲಿ ಒಟ್ಟಾರೆ ಉತ್ತಮ ಕಲಿಕೆ, ಅಭಿವೃದ್ಧಿ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.<br>ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿಗೆ ಅಳವಡಿಸಲು ಈ ಕೆಳಕಂಡಂತೆ ಪೂರ್ವ ಸಿದ್ದತೆ ಮಾಡಿಕೊಳ್ಳಲಾಗಿದೆ.<br>– ಶ್ರೀ. ಮದನ್ ಗೋಪಾಲ್, ಭಾ.ಆ.ಸೇ (ನಿವೃತ್ತ) ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಿ ರಾಷ್ಟ್ರೀಯ ಶಿಕ್ಷಣ ನೀತಿ 2020ರನ್ವಯ ಶಾಲಾ ಹಂತದ(ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಶಿಕ್ಷಣದವರೆಗೂ) ವ್ಯವಸ್ಥೆಯಲ್ಲಿ ಗುಣಮಟ್ಟ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ |

| | | |
|---|---|---|
| | | ಅನುಷ್ಠಾನ ರೂಪು ರೇಷೆಯನ್ನು ಸಿದ್ಧಪಡಿಸಲಾಗುತ್ತಿದೆ.<br>- ಸದರಿ ಕಾರ್ಯಪಡೆಯಲ್ಲಿ ಉಪ ಸಮಿತಿಗಳು, Special Education Zone (SEZ) ಸ್ಥಾಪನೆ Socially Economically Disadvantaged Group(SEDG) ಗಳಿಗೆ ಶೈಕ್ಷಣಿಕ ಅವಕಾಶಗಳು, ಇ.ಸಿ.ಸಿ.ಇ ಹಂತಕ್ಕೆ ಗುಣಮಟ್ಟ ಶಿಕ್ಷಣ, School Standard Setting Authority(SSSA) ಸ್ಥಾಪನೆ, ಶಾಲಾ ಸಂಕೀರ್ಣಗಳ ಸ್ಥಾಪನೆ ಕುರಿತಂತೆ ವಿವಿಧ ಭಾಗೀದಾರರೊಡನೆ ಚರ್ಚಿಸಿ ವರದಿಗಳನ್ನು ಸಿದ್ಧಪಡಿಸಲಾಗುತ್ತಿದೆ.<br>- ಪ್ರಸ್ತುತ ಸಾಲಿನಲ್ಲಿ ಎನ್.ಐ.ಪಿ 2020ರ ಆಶಯದಂತೆ ಮಕ್ಕಳಿಗೆ ಕಲಿಕಾ ಅನುಭವಗಳನ್ನು ನೀಡಿ ಕಲಿಕೆಯನ್ನು ದೃಢಪಡಿಸುವ "ಕಲಿಕಾ ಚೇತರಿಕೆ" ಕಾರ್ಯಕ್ರಮದ ಅನುಷ್ಠಾನ ಮಾಡಲಾಗಿದೆ.<br>- ಇ.ಸಿ.ಸಿ.ಇ/ ಶಾಲಾ ಶಿಕ್ಷಣ/ ವಯಸ್ಕರ ಶಿಕ್ಷಣ/ಶಿಕ್ಷಕರ ಶಿಕ್ಷಣ ಕ್ಷೇತ್ರಗಳಿಗೆ ಪಠ್ಯಕ್ರಮ ಮತ್ತು ಬೋಧನಾ ಕ್ರಮ ರಚಿಸಲು ಚಾಲನಾ ಸಮಿತಿಗಳನ್ನು ರಚಿಸಲಾಗಿದೆ.<br>- ತರಗತಿಗಳಲ್ಲಿ ಸಮರ್ಪಕವಾದ ಬೋಧನಾ ಪ್ರಕ್ರಿಯೆ ನಿರ್ವಹಿಸಲು ಶಿಕ್ಷಕರಿಗೆ ವೃತ್ತಿಪರ ತರಬೇತಿ ನೀಡಲಾಗಿದೆ.<br>- ಬುನಾದಿ ಕಲಿಕೆಗಾಗಿ ರಾಷ್ಟ್ರೀಯ ನಿಪುಣ್ ಭಾರತ್ ಮಿಷನ್ ಅನ್ನು ಅನುಷ್ಠಾನಗೊಳಿಸಲಾಗಿದೆ. 2026-27ರೊಳಗೆ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು 3ನೇ ತರಗತಿಯನ್ನು ತಲುಪುವಷ್ಟರಲ್ಲಿ ಬುನಾದಿ ಸಾಕ್ಷರತೆ ಮತ್ತು ಗಣಿತ ಕೌಶಲ್ಯವನ್ನು ಹೊಂದುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>- ಎಲ್ಲಾ ಮಕ್ಕಳು ಶಾಲೆಗೆ ಸಿದ್ಧರಾಗಿರುವುದನ್ನು ಖಚಿತಪಡಿಸಿಕೊಳ್ಳಲು 1,2 ಹಾಗೂ 3ನೇ ತರಗತಿಯ ಎಲ್ಲಾ ಮಕ್ಕಳಿಗಾಗಿ 03 ತಿಂಗಳ ಮಧ್ಯಂತರ, ಆಟ ಆಧಾರಿತ ಶಾಲಾ ಸಿದ್ಧತಾ ಮಾಡ್ಯೂಲ್ ಅನುಷ್ಠಾನಗೊಳಿಸಲಾಗಿದೆ.<br>- ದೀಕ್ಷಾ ವೇದಿಕೆ (DIKSHA Portal) ಮುಖಾಂತರ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಬೋಧನಾ ಕಲಿಕಾ ಇ-ಸಾಮಗ್ರಿಯನ್ನು ಒದಗಿಸಲಾಗಿದೆ.<br>- ಪ್ರತಿಯೊಂದು ಮಗುವಿನ ಪೋಷಕಾಂಶಯುಕ್ತ |

| | | |
|---|---|---|
| | | ಉಪಹಾರ ಮತ್ತು ದೈಹಿಕ/ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗಿದೆ.<br>– ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು "ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ" ಎಂದು ಮರು ನಾಮಕರಣ ಮಾಡಲಾಗಿದೆ.<br>– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಇ.ಸಿ.ಸಿ.ಇ ಹಂತಕ್ಕೆ 6 ಉಪಸಮಿತಿಗಳನ್ನು ರಚಿಸಿ ಪಠ್ಯಕ್ರಮ ವಿನ್ಯಾಸ, ಪಠ್ಯಕ್ರಮ+ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು +ಮೌಲ್ಯಮಾಪನ, ಸಾಮರ್ಥ್ಯ ಅಭಿವೃದ್ಧಿ, ಸಮುದಾಯ ತಲುಪುವಿಕೆ, ಮಗುವಿನ ಆರಂಭಿಕ ಉತ್ತೇಜನ ಮತ್ತು ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕ್ಷೇತ್ರಗಳಿಗೆ ಸಂಬಂಧಪಟ್ಟ ಮಾಡ್ಯೂಲ್/ವರದಿಗಳನ್ನು ಸಿದ್ದಪಡಿಸಲಾಗುತ್ತಿದೆ. |
| ಇ) | ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಕಾರ್ಯಭಾರ ಮರು ಹೊಂದಾಣಿಕೆ ಮತ್ತು ಸೇವಾ ವಿಷಯಗಳ ಹಾಗೂ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರ ಕೌಶಲ್ಯ ಉನ್ನತೀಕರಣ ಮತ್ತು ಪುನರ್ವಸತಿಗೆ ಸರ್ಕಾರದ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಪೂರ್ವಭಾವಿ ಕ್ರಮಗಳು ಪರಿಶೀಲನೆಯಲ್ಲಿವೆ. |

ಇಪಿ 364 ಪಿಜಿಸಿ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ರಾಷ್ಟ್ರೀಯ ಶಿಕ್ಷಣ ನೀತಿ

ಕರ್ನಾಟಕ ಶಿಕ್ಷಣದ ನವಜ್ಯೋತಿ

# ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦
# (ಎನ್‌ಇಪಿ 2020)ರ ಅನುಷ್ಠಾನಕ್ಕಾಗಿ
# ಕರ್ನಾಟಕದ ಯೋಜನೆಯ ಸಾರಾಂಶ

ಕರ್ನಾಟಕದಲ್ಲಿ ಎನ್‌ಇಪಿ 2020ರ ಅನುಷ್ಠಾನ ಕಾರ್ಯಪಡೆಯಿಂದ

ನವೆಂಬರ್ 2020

# I. ಕಾರ್ಯಪಡೆ ಅಳವಡಿಸಿಕೊಂಡಿರುವ ಮಾರ್ಗ ಮತ್ತು ವಿಧಾನಗಳು

ಕರ್ನಾಟಕ ಸರ್ಕಾರವು 4ನೇ ಮಾರ್ಚ್ 2020ರಂದು ಕಾರ್ಯಪಡೆಯನ್ನು ರಚಿಸಿತು. ಮುಂದುವರಿದು, ಶಿಕ್ಷಣ ನೀತಿಯ ಎರಡು ನಿರ್ಣಾಯಕ ಅಂಶಗಳಿಗೆ ಸಂಬಂಧಿಸಿದಂತೆ ಕಾರ್ಯಪಡೆಯು ಎರಡು ಉಪಸಮಿತಿಗಳನ್ನು ರಚಿಸಿತು. ಉನ್ನತ ಶಿಕ್ಷಣದಲ್ಲಿ ಪಠ್ಯಕ್ರಮ ಸುಧಾರಣೆ ಮತ್ತು ಉನ್ನತ ಶಿಕ್ಷಣದಲ್ಲಿ ಆಡಳಿತ ಹಾಗೂ ನಿಯಂತ್ರಣದ ಪರಿವರ್ತನೆ – ಇವೇ ಆ ಎರಡು ಪ್ರಮುಖ ಅಂಶಗಳಾಗಿವೆ. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸಮಗ್ರ ಶಿಕ್ಷಣದಲ್ಲಿ ವಿವಿಧ ಭಾಗೀದಾರರುಗಳೊಂದಿಗೆ ಹಲವು ಚರ್ಚೆಗಳು ಮತ್ತು ಅಧ್ಯಾಯಾಧಾರಿತವಾಗಿ ರಚಿತವಾದ ಉಪ ಗುಂಪುಗಳ ಕಾರ್ಯಚಟುವಟಿಕೆಗಳ ಫಲಶ್ರುತಿಗಳನ್ನು ಅನುಷ್ಠಾನ ಯೋಜನೆಯನ್ನು ಅಭಿವೃದ್ಧಿಪಡಿಸಲು ಬಳಸಿಕೊಳ್ಳಲಾಯಿತು.

1. **ಮೂಲತತ್ವ:** ಈ ಯೋಜನೆಯು ಶಾಸಕಾಂಗದ ಕ್ರಿಯೆಗಳು, ರಚನಾತ್ಮಕ ಪರಿವರ್ತನೆ, ಆಡಳಿತಾತ್ಮಕ ಬದಲಾವಣೆ, ಪಠ್ಯಕ್ರಮ ಸುಧಾರಣೆ ಇವೇ ಮುಂತಾದ ಪ್ರಮುಖ ಆಶಯಗಳನ್ನು ಆಧರಿಸಿ ಕಾರ್ಯ ಚಟುವಟಿಕೆಯನ್ನು ರೂಪಿಸುತ್ತದೆ. ಈ ವರದಿಯಲ್ಲಿ ಹಣಕಾಸಿಗೆ ಸಂಬಂಧಿಸಿದ ಪರಿಣಾಮಗಳನ್ನು ಚರ್ಚಿಸಲಾಗಿಲ್ಲ. ಮುಂದುವರಿದು, ಸಮಾಲೋಚನಾ ಪ್ರಕ್ರಿಯೆಯ ಮೂಲಕ ಅನುಷ್ಠಾನದ ಹಂತಗಳನ್ನು ಅಭಿವೃದ್ಧಿಪಡಿಸಲಾಗುವುದು.

2. **ಆದ್ಯತೆ:** ಮುಖ್ಯವಾಗಿ 'ಶೂನ್ಯ ವರ್ಷ'ಕ್ಕೆ (2020–2021) ಸಂಬಂಧಿಸಿದ ಕಾರ್ಯಚಟುವಟಿಕೆಗಳಿಗೆ ಆದ್ಯತೆ ನೀಡಲಾಗುವುದು. ಇದನ್ನು ಅಗತ್ಯವಿರುವ ಶಾಸಕಾಂಗ ಕ್ರಿಯೆ ಹಾಗೂ ಹಣಕಾಸಿನ ಪರಿಣಾಮಗಳು ಇಲ್ಲದೆಯೂ ಕಾರ್ಯರೂಪಕ್ಕೆ ತರಬಹುದಾಗಿದೆ.

3. **ನಿರ್ಣಾಯಕವಾಗಿ ತೊಡಗಿಸಿಕೊಳ್ಳುವಿಕೆ:** ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳೂ ಎಲ್ಲಾ ಕಾರ್ಯಚಟುವಟಿಕೆಗಳ ಮೇಲೆ ಸಂಪೂರ್ಣ ಸ್ವಾಮ್ಯ ಹೊಂದಿರಬೇಕಾದುದು ಅತ್ಯಗತ್ಯವಾಗಿದೆ ಮತ್ತು ನೀತಿಯ ನಿಬಂಧನೆಗಳ ಅನುಸಾರ ಶಾಲಾ ಹಂತದಲ್ಲಿಯೂ ಸಹ ಸ್ವಾಯತ್ತತೆಯನ್ನು ನೀಡಲಾಗುವುದು. ಎಲ್ಲಾ ಭಾಗೀದಾರರೂ ಇದರಲ್ಲಿ ಪಾಲ್ಗೊಳ್ಳುವುದರ ಜೊತೆಗೆ ತಮ್ಮ ಚಟುವಟಿಕೆಯ ಮಾಲೀಕತ್ವವನ್ನು ಅಂಗೀಕರಿಸಿದಾಗಲಷ್ಟೇ ಅನುಷ್ಠಾನ ಯಶಸ್ವಿಯಾಗಲು ಸಾಧ್ಯ ಸಿಬ್ಬಂದಿಗಳ ಸಿದ್ಧತೆಯೂ ಕೂಡ ಅತ್ಯಗತ್ಯವಾಗಿದೆ.

# II. ಕರ್ನಾಟಕದಲ್ಲಿ ಶಿಕ್ಷಣ – ಹಾಲಿ ಸ್ಥಿತಿ

ಕರ್ನಾಟಕವು ದೇಶದ ಪ್ರಮುಖ ಶಿಕ್ಷಣ ಕೇಂದ್ರವಾಗಿದೆ. ಇಲ್ಲಿ ಹಲವು ಪ್ರಸಿದ್ಧ ಶಾಲೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ 2020)ರ ಮೂಲಭೂತ ತತ್ವಗಳಿಗೆ ಪೂರಕವಾದ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.

- ನಲಿ ಕಲಿ ಉಪಕ್ರಮದ ಅಂಗವಾಗಿ **ಬಹುಭಾಷಾ ಪರಿಸರ** ಮತ್ತು ಮಕ್ಕಳ ಸ್ನೇಹಿ ಚಟುವಟಿಕೆ ಆಧಾರಿತ ಪಠ್ಯಕ್ರಮ

- ಕ್ಷೀರಭಾಗ್ಯ ಯೋಜನೆಯ ಅಡಿಯಲ್ಲಿ ಮಕ್ಕಳಿಗೆ ಪ್ರತಿನಿತ್ಯ ಹಾಲನ್ನು ಒದಗಿಸುವ ಮೂಲಕ ಮಕ್ಕಳ ಪೌಷ್ಟಿಕಾಂಶವನ್ನು ಹೆಚ್ಚಿಸಲಾಗಿದೆ.

- 276 ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳಲ್ಲಿ **ಆರಂಭಿಕ ವರ್ಷಗಳ ಕಲಿಕೆಯನ್ನು** ಪ್ರಾರಂಭಿಸಲಾಗಿದೆ. ಇದರಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 30 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲಾಗಿದೆ.

- **ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳು** ಕೆ- 12 ಸಾರ್ವಜನಿಕ ಶಾಲೆಗಳಾಗಿದ್ದು, ಇವುಗಳನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗಿದೆ.

- **ಶಿಕ್ಷಕರ ವೃತ್ತಿಪರ ಅಭಿವೃದ್ಧಿ (ಟಿಪಿಡಿ)** ಇದು ಗುರು ಚೇತನ ಮಾದರಿ ಕಾರ್ಯಕ್ರಮದಡಿ ಶಿಕ್ಷಕರಿಗೆ ಲಭ್ಯವಿರುವ ಆಯ್ಕೆ ಆಧಾರಿತ ಸ್ವಯಂಗತಿಯ ಉಪಕ್ರಮವಾಗಿದೆ. ಇದರಲ್ಲಿ ಆಯ್ಕೆ ಮಾಡಲು ಅನುಕೂಲವಾಗುವಂತೆ ವಿವಿಧ ಕಾಲಾವಧಿಯ 100ಕ್ಕೂ ಹೆಚ್ಚು ಘಟಕಗಳಿವೆ.

- ಕರ್ನಾಟಕವಲ್ಲಿ **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್** ಅಸ್ತಿತ್ವದಲ್ಲಿದೆ.

- **ಕರ್ನಾಟಕ ರಾಜ್ಯ ನಾವೀನ್ಯತಾಪೂರ್ಣ ವಿಶ್ವವಿದ್ಯಾಲಯಗಳ ಮಸೂದೆ 2011 ಶೈಕ್ಷಣಿಕ** ವಲಯದಲ್ಲಿ ಹೆಚ್ಚು ಸ್ವಾಯತ್ತತೆಯನ್ನು ಒದಗಿಸುವ ಮೂಲಕ ನಾವೀನ್ಯತಾಪೂರ್ಣವಾದ ವಿಶ್ವವಿದ್ಯಾಲಯಗಳನ್ನು ಪುನರ್ ರಚಿಸಲು ಮತ್ತು ಸ್ಥಾಪಿಸಲು ನೆರವಾಗಿದೆ.

- **ಕರ್ನಾಟಕ ಉನ್ನತ ಶಿಕ್ಷಣ ಅಕಾಡೆಮಿ (ಕೆಎಚ್‌ಇಎ)** ಇದು ಧಾರವಾಡದಲ್ಲಿದ್ದು ಇದನ್ನು ಕರ್ನಾಟಕ ರಾಜ್ಯದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳ ಸರ್ವಾಂಗೀಣ ಕಾರ್ಯಚಟುವಟಿಕೆಗಳನ್ನು ಸುಧಾರಿಸಲು ನೆರವಾಗುವ ಉದ್ದೇಶದಿಂದ ಸ್ಥಾಪಿಸಲಾಗಿದೆ.

- **ಸಮನ್ವಯ ಶಿಕ್ಷಣ ಉಪಕ್ರಮಗಳ** ಅಡಿಯಲ್ಲಿ ಮುಖ್ಯವಾಗಿ ಕಲ್ಯಾಣ ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯನ್ನು ಸ್ಥಾಪಿಸಲಾಗಿದೆ. ಪ್ರಾಂತ್ಯದ ಅಭಿವೃದ್ಧಿಯ ವಿಷಯದಲ್ಲಿ ಇದು ಕ್ರಾಂತಿಕಾರಕ ಉಪಕ್ರಮವಾಗಿದ್ದು ಇದು ಎನ್‌ಇಪಿ 2020 ತತ್ವಗಳಿಗೆ ತುಂಬ ನಿಕಟವಾಗಿದೆ.

# III. ಕರ್ನಾಟಕದಲ್ಲಿ ಪ್ರಸ್ತಾವಿತ ಶೈಕ್ಷಣಿಕ ಸಂರಚನೆ

## ಕರ್ನಾಟಕ ಶಿಕ್ಷಣ ಆಯೋಗ

ಎಲ್ಲಾ ಇಲಾಖೆಗಳು, ಚಟುವಟಿಕೆಗಳು, ಅಂಗಸಂಸ್ಥೆಗಳು, ಮತ್ತು ಸಂಘಟನೆಗಳ ನಡುವೆ ಸಂಯೋಜನೆ ಮತ್ತು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅಗತ್ಯತೆಯಿದೆ. ಆದ್ದರಿಂದ ಕರ್ನಾಟಕ ಸರ್ಕಾರದ ವಿವಿಧ ಸಂಸ್ಥೆಗಳು ಹಾಗೂ ಇಲಾಖೆಗಳಲ್ಲಿ ಪ್ರಗತಿಯಲ್ಲಿರುವ ವಿವಿಧ ಪ್ರಯತ್ನಗಳನ್ನು ಸಂಯೋಜಿಸುವ ಒಂದು ಬೃಹತ್ತಾದ, ವ್ಯಾಪಕವಾದ ಅಂಗಸಂಸ್ಥೆಯನ್ನು ರಚಿಸುವ ಅಗತ್ಯವಿದೆ. ಕಾರ್ಯಪಡೆಯು ಕರ್ನಾಟಕ

ಶಿಕ್ಷಣ ಆಯೋಗ (ಕೆಎಸ್‌ಎ)/ ಕರ್ನಾಟಕ ಶಿಕ್ಷಣ ಕಮಿಷನ್ (ಕೆಇಸಿ) ಅನ್ನು ರಚಿಸಲು ಸಲಹೆ ನೀಡುತ್ತದೆ. ಮುಖ್ಯಮಂತ್ರಿಗಳು ಇದರ ಅಧ್ಯಕ್ಷರಾಗಿದ್ದು, ರಾಜ್ಯದಲ್ಲಿನ ಶೈಕ್ಷಣಿಕ ಬೆಳವಣಿಗೆಯನ್ನು ಸಮಗ್ರವಾಗಿ ಪರಿಶೀಲಿಸಲು ಮತ್ತು ಕೆಎಸ್‌ಎ/ಕೆಇಸಿಗಳನ್ನು ಅವರ ಅಧಿಕಾರವನ್ನು ಬಳಸಿಕೊಂಡು ಅಗತ್ಯವಿರುವಂತೆ ಸೂಕ್ತವಾಗಿ ಸಬಲಗೊಳಿಸಲು ಹಾಗೂ ಪ್ರೋತ್ಸಾಹಿಸಲು ವರ್ಷಕ್ಕೆ ಕನಿಷ್ಠ ಎರಡು ಬಾರಿ ಅಥವಾ ಅಗತ್ಯವಿದ್ದಾಗಲೆಲ್ಲ ಸಭೆಗಳನ್ನು ಆಯೋಜಿಸಬೇಕು. ರಾಜ್ಯದ ಉನ್ನತ ಶಿಕ್ಷಣ ಸಚಿವರು ಹಾಗೂ ಶಾಲಾ ಶಿಕ್ಷಣ ಸಚಿವರು ಕೆಎಸ್‌ಎ/ಕೆಇಸಿಯ ಉಪಾಧ್ಯಕ್ಷರಾಗತಕ್ಕದ್ದು.

### ಶಾಲಾ ಶಿಕ್ಷಣದ ಸ್ವರೂಪ

ಶಾಲಾ ಶಿಕ್ಷಣದ ಆಡಳಿತ ಹಾಗೂ ನಿಯಂತ್ರಣಕ್ಕೆ ಪ್ರಸ್ತಾಪಿತವಾದ ಸ್ವರೂಪವು ಅಧಿಕಾರದ ಪ್ರತ್ಯೇಕತೆಯನ್ನು ಹಾಗೂ ಶಾಲಾ ಶಿಕ್ಷಣದ ವಿವಿಧ ಏಜೆನ್ಸಿಗಳ ನಡುವೆ ಅವುಗಳ ವ್ಯಾಪ್ತಿಯ ಅತಿಕ್ರಮಣ ಆಗದಿರುವುದನ್ನು ಖಾತರಿಪಡಿಸುತ್ತದೆ. ಪ್ರಸ್ತಾವಿತ ಸ್ವರೂಪದಲ್ಲಿ ಸ್ವತಂತ್ರ ಅಂಗಸಂಸ್ಥೆಗಳು ಶಾಲೆಗಳ ಆಡಳಿತ, ಶಾಲಾ ನಿಯಂತ್ರಣ, ಶೈಕ್ಷಣಿಕ ವಿಷಯಗಳ ನಿರ್ಧಾರ, ಮೌಲ್ಯಮಾಪನಗಳನ್ನು ಕ್ರಮವಾಗಿ ನಿರ್ವಹಿಸುತ್ತವೆ. ಅಧಿಕಾರದ ಈ ಪ್ರತ್ಯೇಕತೆಯನ್ನು ಕರ್ನಾಟಕ ರಾಜ್ಯ ಶೈಕ್ಷಣಿಕ ಮಂಡಳಿ (ಕೆಎಸ್‌ಇಸಿ)ಯ ಸ್ಥಾಪನೆಯು ಖಾತರಿಪಡಿಸುತ್ತದೆ.

### ಉನ್ನತ ಶಿಕ್ಷಣದ ಸ್ವರೂಪ

ಎನ್‌ಇಪಿ 2020ರ ಸ್ವರೂಪವನ್ನು ಪ್ರತಿಫಲಿಸುವ ಕಾರ್ಯಪಡೆಯು ಉನ್ನತ ಶಿಕ್ಷಣದ ಆಡಳಿತ ಹಾಗೂ ನಿಯಂತ್ರಣವನ್ನು ಕುರಿತು ಪ್ರಸ್ತಾಪಿಸುತ್ತದೆ. ಕರ್ನಾಟಕ ಉನ್ನತ ಶಿಕ್ಷಣ ಆಯೋಗ (ಕೆಎಚ್‌ಇಸಿ)ವು ಉನ್ನತ ಶಿಕ್ಷಣ ಕ್ಷೇತ್ರದ ಆಡಳಿತ ಹಾಗೂ ನಿಯಂತ್ರಣದ ಮೇಲ್ವಿಚಾರಣೆ ಮಾಡುವ ಸ್ವತಂತ್ರ ಸ್ವಾಯತ್ತ ಅಂಗಸಂಸ್ಥೆಗಳಾದ ಕರ್ನಾಟಕ ಉನ್ನತ ಶಿಕ್ಷಣ ನಿಯಂತ್ರಣಾ ಮಂಡಳಿ (ಕೆಎಚ್‌ಇಆರ್‌ಸಿ). ಕರ್ನಾಟಕ ಸಂಶೋಧನೆ ಹಾಗೂ ನಾವೀನ್ಯತೆಯ ಶೋಧನಾ ಮಂಡಳಿ (ಕೆಆರ್‌ಐಸಿ) ಗಳ ಮೇಲೆ ನಿಗಾ ವಹಿಸುವ ಒಂದು ಸಂಸ್ಥೆಯಾಗಿರುತ್ತದೆ. ಕೇಂದ್ರದ ರಾಷ್ಟ್ರೀಯ ಮಾನ್ಯತಾ ಸಂಸ್ಥೆ (ನ್ಯಾಕ್)ಯು ರಾಜ್ಯದಲ್ಲಿ ಅಗತ್ಯ ಮಾನ್ಯತಾ ಸಂಸ್ಥೆ (ಎಐ)ಗಳನ್ನು ಸ್ಥಾಪಿಸುತ್ತದೆ.

## IV. ಕರ್ನಾಟಕದಲ್ಲಿ ಶಾಲಾ ಶಿಕ್ಷಣಕ್ಕೆ ಪ್ರಸ್ತಾವಿತ ಯೋಜನೆ

### ಶಾಲೆಗಳ ನಿಯಂತ್ರಣ ಹಾಗೂ ಕಾರ್ಯಾಚರಣೆಗಳ ಪ್ರತ್ಯೇಕತೆ

ಕರ್ನಾಟಕ ಶಾಲಾ ಶಿಕ್ಷಣ ಮಂಡಳಿ (ಕೆಎಸ್‌ಇಸಿ)ಯು ಶಾಲಾ ಶಿಕ್ಷಣ ಹಾಗೂ ಸರ್ಕಾರದೊಂದಿಗೆ ಸಂಬಂಧವುಳ್ಳ ವಿವಿಧ ಇಲಾಖೆಗಳು ಹಾಗೂ ಅಂಗಸಂಸ್ಥೆಗಳ ನಡುವೆ ಸಮನ್ವಯ, ಸಂಪರ್ಕಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ವಿಶಾಲ ಹಂತಗಳಲ್ಲೂ ನಿಗಾ ವಹಿಸಬೇಕು. ಶಾಲಾ ಶಿಕ್ಷಣಕ್ಕೆ ಸಾರ್ವಜನಿಕ ಧನಸಹಾಯವನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವುದು ಹೇಗೆ ಎಂಬ ಪ್ರಯತ್ನದಲ್ಲಿ ಒಂದು ಕಾರ್ಯಪಡೆಯನ್ನು ಸ್ಥಾಪಿಸಬೇಕು. ಶಿಕ್ಷಣದ ನಿಯಂತ್ರಣಾ ಘಟಕವಾಗಿ ಎಸ್‌ಎಸ್‌ಎಸ್‌ಎ ಎಂಬ ಮತ್ತೊಂದು ಹೊಸ ಅಂಗಸಂಸ್ಥೆಯನ್ನು ಸ್ಥಾಪಿಸಬೇಕು.

ಡಿಎಸ್‌ಇಆರ್‌ಟಿಯು ಸೂಕ್ತ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸಿ 'ಹಗುರ ಆದರೆ ಪ್ರಬಲವಾದ' ಶಾಲಾ ಗುಣಮಟ್ಟದ ಪರಿಶೀಲನೆ ಹಾಗೂ ಮಾನ್ಯತಾ ರಚನೆ (ಎಸ್‌ಕ್ಯೂಎಎಫ್)ಯ ಮೇಲೆ ಆಧಾರಿತವಾದ ನಿಯಂತ್ರಣಾ ತತ್ವಗಳನ್ನು ಅಭಿವೃದ್ಧಿಪಡಿಸಬೇಕು. ಶಾಲಾ ಶಿಕ್ಷಣ ಇಲಾಖೆಯೊಳಗಿನ ಇತರ ಅಂಗಸಂಸ್ಥೆಗಳ ಜವಾಬ್ದಾರಿಗಳನ್ನು ಮರುರೂಪಿಸಬೇಕು ಮತ್ತು ಅವುಗಳ ನಡುವೆ ಕಾರ್ಯವ್ಯಾಪ್ತಿಯ ಅತಿಕ್ರಮಣವಾಗುವುದಿಲ್ಲ ಅಥವಾ ಆಸಕ್ತಿಗಳ ನಡುವೆ ಸಂಘರ್ಷ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಬೇಕು.

## ಶಾಲಾ ಶಿಕ್ಷಣದ ಮರುಸಂರಚನೆ

ಪಠ್ಯಕ್ರಮದ ಸುಧಾರಣೆಯು ಶಾಲಾ ಶಿಕ್ಷಣದ ಹಾಲಿ ಇರುವ ರಚನೆಯನ್ನು 5+3+3+4ರ (ಬುನಾದಿ, ಸಿದ್ಧತಾ, ಮಾಧ್ಯಮಿಕ ಹಾಗೂ ಪ್ರೌಢ ಹಂತ) ರಚನೆಯಾಗಿ ಪರಿವರ್ತಿಸಲು ಚಾಲನೆ ನೀಡಬೇಕು. ಒಂದೆಡೆ ಹನ್ನೊಂದು ಮತ್ತು ಹನ್ನೆರಡನೆಯ ತರಗತಿಗಳನ್ನು ಪ್ರೌಢ ಹಂತದೊಂದಿಗೆ ಸಮನ್ವಯಗೊಳಿಸುವ ಅವಶ್ಯಕತೆ ಮತ್ತೊಂದೆಡೆ 'ಆರಂಭಿಕ ವರ್ಷಗಳ ಶಾಲೆಯು 5 ವರ್ಷಗಳ ಸಮಗ್ರ ಪಠ್ಯಕ್ರಮದ ಮೇಲೆ ಕೆಲಸ ಪ್ರಾರಂಭಿಸಬೇಕು. ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ)ಯು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ನಿರ್ದಿಷ್ಟವಾಗಿ ಆರಂಭಿಕ ಹಾಗೂ ಸಿದ್ಧತಾ ಹಂತಗಳನ್ನು ಪರಿಷ್ಕರಿಸಿ ಹಾಲಿ ಇರುವ ಪಠ್ಯಕ್ರಮದ ಹೊರೆಯನ್ನು ಕಡಿಮೆ ಮಾಡಬೇಕು.

## ಶಾಲಾ ಶಿಕ್ಷಣದಲ್ಲಿ ಪೂರ್ವ ಬಾಲ್ಯಾವಸ್ಥೆ ಶಿಕ್ಷಣದ ಸೇರ್ಪಡೆ

ಪ್ರಧಾನ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳ ನೇತೃತ್ವದಲ್ಲಿ ರಾಜ್ಯಮಟ್ಟದ ಸಮನ್ವಯ ಘಟಕವನ್ನು ಸ್ಥಾಪಿಸಬೇಕು. ಇವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳ ನಡುವೆ ಸಭೆಗಳು ಏರ್ಪಡುವ ಮೂಲಕ ಎರಡೂ ಇಲಾಖೆಗಳ ಕರ್ತವ್ಯ ಹಾಗೂ ಹೊಣೆಗಾರಿಕೆಗಳ ಸ್ಪಷ್ಟತೆ ಸಿಗುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮೊದಲ ಹಂತದಲ್ಲಿ ರಾಜ್ಯದಾದ್ಯಂತ 0 ರಿಂದ 3 ಹಾಗೂ 3 ರಿಂದ 8 ವಯೋಮಿತಿಯ ನಡುವಿನ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಅವರೊಂದಿಗೆ ತೊಡಗಿಕೊಳ್ಳುವ ಶಿಕ್ಷಕರುಗಳ ಅನುಪಾತವನ್ನು ಅರಿತುಕೊಳ್ಳಬೇಕು. ಎರಡನೆಯ ಹಂತವಾಗಿ ಎನ್‌ಇಪಿ 2020 ತತ್ವಗಳೊಂದಿಗೆ ಪೂರ್ತಿಯಾಗಿ ಹೊಂದಾಣಿಕೆಯಾಗುವಂತೆ, ಪಠ್ಯಕ್ರಮವನ್ನು ಹೊಸ ರಚನೆಗೆ ತಕ್ಕಂತೆ ಪುನರ್ ರೂಪಿಸಬೇಕು. ಈ ಸಂಬಂಧವಾಗಿ ನಲಿ ಕಲಿ ಪಠ್ಯಕ್ರಮದ ಪರಿಷ್ಕರಣೆಗಾಗಿ ಮತ್ತು ನಲಿ ಕಲಿ ಗ್ರೇಡ್‌ಗಳು 1–2 ಹಾಗೂ ಗ್ರೇಡ್ 3ರ ಪ್ರತ್ಯೇಕತೆಗಾಗಿ ಒಂದು ಉಪಸಮಿತಿಯನ್ನು ರಚಿಸಬೇಕು. ಜೊತೆಗೆ ರಾಜ್ಯದಾದ್ಯಂತ ಎಲ್ಲಾ ಆರಂಭಿಕ ವರ್ಷಗಳ ಶಿಕ್ಷಣವು 'ಚಿಲಿ ಪಿಲಿ ಪ್ಲಸ್' ಪಠ್ಯಕ್ರಮವನ್ನು ಆಧರಿಸುವಂತೆ ಒಂದು ವಿವರವಾದ ಮಾರ್ಗಸೂಚಿಯನ್ನು ಹೊರಡಿಸಬೇಕು.

## ಆರಂಭಿಕ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನದ ಸಾಧನೆ

ಕೇಂದ್ರವು ಅಪೇಕ್ಷಿಸುವ ಮಾದರಿಯಂತೆ ರಾಜ್ಯದ ಮಿಷನ್ ಆಗಿ ಪರಿವರ್ತಿತವಾಗಸಬಲ್ಲಂತಹ ಒಂದು ಆರಂಭಿಕ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನದ ವಿಭಾಗನ್ನು ಸ್ಥಾಪಿಸಬೇಕು. ಇದರ ಮೊದಲ ಕಾರ್ಯವಾಗಿ ರಾಜ್ಯದ ಹಾಲಿ ಇರುವ ಮಾಹಿತಿಯನ್ನು ಬಳಸಿಕೊಂಡು ಮೂಲಭೂತ ಸಾಕ್ಷರತೆ

ಹಾಗೂ ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದಂತೆ ಕಲಿಕಾ ಸ್ಥಿತಿಯನ್ನು ಅರಿತುಕೊಳ್ಳಬೇಕು. ನಿರ್ದಿಷ್ಟವಾಗಿ 3 ರಿಂದ 5ನೇ ಗ್ರೇಡ್‌ನಲ್ಲಿರುವ ಮಕ್ಕಳ ಕಲಿಕೆಯಲ್ಲಿ ಅನಾನುಕೂಲವಿರುವ ಪ್ರದೇಶಗಳನ್ನು ಗುರುತಿಸಬೇಕು. ಈ ಮೂಲ ಅಂಶಗಳ ಆಧಾರದ ಮೇಲೆ ಕ್ರಿಯಾ ಯೋಜನೆ ರೂಪಿಸಬೇಕು.

## ಸಮತೆಯುಳ್ಳ ಹಾಗೂ ಸಮನ್ವಯ ಶಿಕ್ಷಣ

ಕರ್ನಾಟಕ ಸರ್ಕಾರವು ಶಿಕ್ಷಣದಲ್ಲಿ ಸಮನ್ವಯ ಸಂಬಂಧಿ ಆಶಯಗಳನ್ನು ಸಾಧಿಸಲು ಲಿಂಗಾಧಾರಿತ ಧನಸಹಾಯ ಹಾಗೂ ದಿವ್ಯಾಂಗ ಮಕ್ಕಳ ಧನಸಹಾಯಕ್ಕಾಗಿ ಉಪಕ್ರಮಗಳನ್ನು ಎರಡು ವಿಶೇಷ ಅಂಶಗಳನ್ನಾಗಿ ಪರಿಗಣಿಸಿ ಕೈಗೆತ್ತಿಕೊಳ್ಳಬೇಕು. ಮುಂದುವರಿದು, ಈ ಸಮಸ್ಯೆಯನ್ನು ಬಗೆಹರಿಸಲು ರಾಜ್ಯವು ಸಮರ್ಪಕ ಸಂಖ್ಯೆಯ ವಿಶೇಷ ಶೈಕ್ಷಣಿಕ ವಲಯ (ಎಸ್‌ಇಝಡ್)ಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಅರ್ಹತಾ ನೋಂದಣಿ ಅನುಪಾತ (ಇಇಆರ್) ನಿರ್ಧಾರಕ ಅಂಶವಾಗಿದೆ. ಅಂತಿಮವಾಗಿ, ಎಲ್ಲಾ ಶಿಷ್ಯವೇತನಗಳನ್ನೂ ಕ್ರೋಢೀಕರಿಸಿ ವಿದ್ಯಾರ್ಥಿಗಳಿಗೆ ಒಂದೇ ವೇದಿಕೆಯಲ್ಲಿ ಒದಗಿಸಬೇಕು. ಈ ಉಪಕ್ರಮಗಳು ಸಮಾನ ಹಾಗೂ ಸಮನ್ವಯ ಶಿಕ್ಷಣ ಪದ್ಧತಿಯನ್ನು ಸಾಧಿಸಲು ನೆರವಾಗುತ್ತವೆ.

## ಶಾಲಾ ಸಂಕೀರ್ಣಗಳು (ಎಸ್‌ಸಿ)/ ಪರಿಣಾಮಕಾರಿ ಆಡಳಿತ ಹಾಗೂ ಗರಿಷ್ಠ ಸಂಪನ್ಮೂಲಗಳಿಗಾಗಿ ಕ್ಲಸ್ಟರ್‌ಗಳು

ವಿಶೇಷ ಉಪಕ್ರಮದ ಅಂಗವಾಗಿ ಸ್ಥಾಪಿಸಲಾದ ಕೆಪಿಎಸ್, ಆದರ್ಶ ವಿದ್ಯಾಲಯ, ಮೊರಾರ್ಜಿ ಶಾಲೆಗಳು ಇವೇ ಮುಂತಾದ ಶಾಲೆಗಳನ್ನು ಒಂದು ವಿಭಾಗದ ಅಡಿಯಲ್ಲಿ ತರಬೇಕು: ಈ ಶಾಲೆಗಳನ್ನು ಅವುಗಳ ಕ್ರಮವಾದ ಸಂದರ್ಭಗಳಿಗೆ ಅನುಗುಣವಾಗಿ ಗುರುತಿಸಿ ಇವುಗಳನ್ನು ಶಾಲಾ ಸಂಕೀರ್ಣಗಳನ್ನಾಗಿ ಪರಿವರ್ತಿಸಬೇಕು. ಇದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಗಳನ್ನು ಒದಗಿಸಬಹುದಾದ ಕ್ಷೇತ್ರವೂ ಹೌದು. ಕಾರ್ಯಪಡೆಯು ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ತಮ್ಮದೇ ಶಾಲಾ ಸಂಪರ್ಕ ಜಾಲಗಳನ್ನು ಪ್ರಾರಂಭಿಸಲು ಮತ್ತು ಆ ಮೂಲಕ ಶಾಲೆಗಳು ಪರಸ್ಪರ ಪ್ರಯೋಜನ ಪಡೆದುಕೊಳ್ಳಲು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲು ಸಹ ಸೂಚಿಸುತ್ತದೆ.

## ಪಠ್ಯಕ್ರಮ, ಬೋಧನಾ ವಿಧಾನ ಹಾಗೂ ಮೌಲ್ಯಮಾಪನಾ ಸುಧಾರಣೆಗಳು

ಡಿಎಸ್‌ಇಆರ್‌ಟಿಯು ಎನ್‌ಇಪಿ 2020ರಲ್ಲಿ ಸೂಚಿಸಲಾದ ತತ್ವಗಳನ್ನು ಆಧರಿಸಿ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ಪರಿಷ್ಕರಿಸುವಲ್ಲಿ ನೇತೃತ್ವವನ್ನು ವಹಿಸಬೇಕು. ಅವುಗಳ ವಿವಿಧ ಹಂತಗಳ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಡಿಎಸ್‌ಇಆರ್‌ಟಿಯ ಒಳಗಡೆಯೇ ವಿವಿಧ ಶಾಖೆಗಳನ್ನು ಪ್ರಾರಂಭಿಸಬೇಕು. ಶಾಲಾ ಶಿಕ್ಷಣದ ಎಲ್ಲಾ ಹಂತಗಳ ನಡುವೆಯೂ ಅಂದರೆ ಇಸಿಸಿಇ, ಪ್ರಾಥಮಿಕ, ಪ್ರೌಢ ಹಂತಗಳು ಹಾಗೂ ಉನ್ನತ ಶಿಕ್ಷಣದ ಪಠ್ಯಕ್ರಮಗಳ ನಡುವೆ ಒಂದು ಸಮನ್ವಯ ಸಾಧಿಸಲು ಜೊತೆಗೂಡಿ ಪ್ರಯತ್ನ ಮಾಡಬೇಕು.

ಕರ್ನಾಟಕ ಶಾಲಾ ಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಇಬಿ) ಹೆಚ್ಚಿನ ಪಕ್ವತೆ ಸಾಧಿಸಲು ಮತ್ತು ಮೌಲ್ಯಮಾಪನ ಸುಧಾರಣೆ ಹಾಗೂ ಪ್ರಾಯೋಗಿಕವಾಗಿ ಅಳವಡಿಸಲು ಇವೇ ಮುಂತಾದ

ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು ಮತ್ತು ಸಮಗ್ರ ಮೌಲ್ಯಾಂಕನಕ್ಕೆ ಪ್ರಸ್ತಾಪಿಸಿರುವ ರಾಷ್ಟ್ರೀಯ ಕಾರ್ಯವ್ಯವಸ್ಥೆ (PARAKH)ಗೆ ಸಲಹೆಗಳನ್ನು ನೀಡಬೇಕು. ಕರ್ನಾಟಕ ಮುಕ್ತ ಶಾಲೆಗಳನ್ನು ಪರ್ಯಾಯ ಮಂಡಳಿಗಳನ್ನಾಗಿ ಬಲಪಡಿಸಬೇಕು.

### ಶಿಕ್ಷಕರ ನೇಮಕಾತಿ, ಸೇವಾ ನಿಯಮಗಳು ಹಾಗೂ ವೃತ್ತಿ ಬೆಳವಣಿಗೆ

ಹಾಲಿ ಇರುವ ಗುರು ಚೇತನ ಎಂಬ ಹೆಸರಿನ ಶಿಕ್ಷಕ ವೃತ್ತಿಪರ ಅಭಿವೃದ್ಧಿ ಮಾದರಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಆ ಮೂಲಕ ಗುರು ಚೇತನವನ್ನು ಶಾಲಾ ಶಿಕ್ಷಣದಲ್ಲಿ ಎಲ್ಲಾ ನಿರಂತರ ವೃತ್ತಿಪರ ಬೆಳವಣಿಗೆಗೆ (ಸಿಪಿಡಿ) ವಿಶಿಷ್ಟ ವೇದಿಕೆಯನ್ನಾಗಿ ರೂಪಿಸಬೇಕು. ಇದು ಶಿಕ್ಷಕರಿಗೆ ಆಯ್ಕೆ ಆಧಾರಿತ ಸ್ವಯಂಗತಿಯ ಸಿಪಿಡಿ ಆಗಿರುತ್ತದೆ. ಇದು ತಂತ್ರಜ್ಞಾನ ಆಧಾರಿತವಾಗಿದ್ದು ಇಂತಹ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಜರಾಗಲು ಶಿಕ್ಷಕರಿಗೆ ಅತಿಕಡಿಮೆ ಅನಾನುಕೂಲತೆಯಿರುವಂತೆ ಇದನ್ನು ರೂಪಿಸಲಾಗುತ್ತದೆ. ಸಿಪಿಡಿಗಳನ್ನು ನಾಗರಿಕ ಸಾಮಾಜಿಕ ಸಂಸ್ಥೆಗಳಿಂದ ಕನಿಷ್ಠ ಶುಲ್ಕದೊಂದಿಗೆ ಖಾಸಗಿ ಶಾಲಾ ಶಿಕ್ಷಣ ಸಹ ಲಭ್ಯವಾದ ವೇದಿಕೆಯು ಕಲ್ಪಿಸಬಹುದು

ಶಾಲಾ ಶಿಕ್ಷಣದ ವಿವಿಧ ಹಂತಗಳೊಳಗೆ ಊರ್ಧ್ವಮುಖಿ ಬೆಳವಣಿಗೆಯನ್ನು ಖಾತರಿಪಡಿಸಲು ಸೇವಾ ನಿಯಮಗಳಲ್ಲಿಯೂ ಬದಲಾವಣೆ ತರತಕ್ಕದ್ದು. ಇದರಿಂದಾಗಿ ವೃತ್ತಿಪರವಾದ ಬೆಳವಣಿಗೆಗೆ ಯಾವ ಶಿಕ್ಷಕನೂ ವಿವಿಧ ಹಂತಗಳಿಗೆ ಚಲಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಯಾರಾದರೂ ಅಪೇಕ್ಷಿಸಿದಲ್ಲಿ ವಿವಿಧ ಹಂತಗಳ ಮಧ್ಯ ಪಾರ್ಶ್ವ ಚಲನೆಗೂ ಅವಕಾಶ ಕಲ್ಪಿಸಬೇಕು. ನೇಮಕಾತಿ ಪ್ರಕ್ರಿಯೆಯು ಗುರುತಿಸಲಾದ ಶಾಲಾ ಸಂಕೀರ್ಣಗಳಲ್ಲಿ ಮಾತ್ರ ನಡೆಯುವುದನ್ನು ಖಾತರಿಪಡಿಸಿದ ಮೇಲೆ ಶಾಲಾ ಸಂಕೀರ್ಣಗಳನ್ನು ಶಿಕ್ಷಕರು ಸ್ವಯಂ ಪ್ರೇರಿತವಾಗಿ ಆಯ್ಕೆ ಮಾಡಿಕೊಳ್ಳುವುದರಿಂದಾಗಿ ನೇಮಕಾತಿ ಪ್ರಕ್ರಿಯೆಯಲ್ಲೂ ಪರಿಣಾಮಕಾರಿ ಬದಲಾವಣೆಗಳಾಗುತ್ತವೆ.

# V. ಕರ್ನಾಟಕದ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವಿತ ಯೋಜನೆ

### ಕರ್ನಾಟಕದಲ್ಲಿ ಉನ್ನತ ಶಿಕ್ಷಣ ನಿಯಂತ್ರಣಕ್ಕೆ ಅಗತ್ಯವಿರುವ ಸ್ವರೂಪ

ಸೂಕ್ತ ಶಾಸನದ ಮೂಲಕ ಹೊಸ ಉನ್ನತ ಶಿಕ್ಷಣ ಸಂಸ್ಥೆ (ಎಚ್‌ಇಐ) ಆಡಳಿತ ಹಾಗೂ ನಿಯಂತ್ರಣಾ ಸ್ವರೂಪಗಳನ್ನು ರಚಿಸಬೇಕು. ಹೊಸ ಕಾಯಿದೆಯ – ಕರ್ನಾಟಕ ವಿಶ್ವವಿದ್ಯಾಲಯಗಳ (ಕೆಸ್‌ಯು) ಕಾಯಿದೆ– ರೂಪದ ಈ ಶಾಸನವು ಅತ್ಯುನ್ನತ ಶಾಸನವಾಗಿರುತ್ತದೆ. ಕೆಎಚ್‌ಇಸಿ, ಕೆಎಚ್‌ಇಜಿಸಿ, ಕೆಎಚ್‌ಇಆರ್‌ಸಿ ಹಾಗೂ ಕೆಆರ್‌ಐಸಿ ಯಂತಹ ಸ್ವತಂತ್ರ ಸ್ವಾಯತ್ತ ಸಂಸ್ಥೆಗಳ ಸ್ಥಾಪನೆ, ನೇಮಕಾತಿ, ಕಾರ್ಯವಿಧಾನ, ನಿಯಮ ನಿಬಂಧನೆಗಳು, ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ನಿಗದಿಪಡಿಸಲು ಈ ಕಾಯಿದೆಯು ನೆರವಾಗುತ್ತದೆ. ಪ್ರಸ್ತಾವಿತ ಕೆಎಸ್‌ಯು ಕಾಯಿದೆಯು ಈ ಸ್ವರೂಪವನ್ನು ರೂಪಿಸಲು ನೆರವಾಗುವುದರ ಜೊತೆಗೆ ಎನ್‌ಇಪಿ 2020ಕ್ಕೆ ಅನುಗುಣವಾಗಿ ವಿಶ್ವವಿದ್ಯಾಲಯಗಳ ಪರಿಕಲ್ಪನೆ, ಸ್ವತಂತ್ರ ಆಡಳಿತ ಮಂಡಳಿ (ಬಿಓಜಿ), ಅಂಗೀಕೃತ ಕಾಲೇಜುಗಳ ಸಬಲೀಕರಣ, ಅವುಗಳ ಶ್ರೇಣೀಕೃತ

ಸ್ವಾಯತ್ತತೆ, ಸಾಂಸ್ಥಿಕ ಬೆಳವಣಿಗೆ ಯೋಜನೆ (ಐಡಿಪಿ), ವಿಶ್ವವಿದ್ಯಾಲಯಗಳಿಗೆ ನಾವೀನ್ಯಪೂರ್ಣವಾದ ನಮ್ಯವಾದ ಸ್ವರೂಪ ನೀಡುವುದು. ಪ್ರವೇಶಾತಿಗೆ ಭೌಗೋಳಿಕ ನಿರ್ಬಂಧಗಳನ್ನು ಪರಿಹರಿಸುವುದು. ಹೊಸ ಶೈಕ್ಷಣಿಕ ಸ್ವರೂಪವನ್ನು ರೂಪಿಸುವುದು ಇವೇ ಮುಂತಾದ ಕ್ಷೇತ್ರಗಳಲ್ಲೂ ಪರಿಶ್ರಮಿಸಬೇಕು. ಎಚ್‌ಇಐಗಳು ಯಾವುದೇ ಹೊರಗಿನ ಸಂಸ್ಥೆಗಳ ಹಸ್ತಕ್ಷೇಪವಿಲ್ಲದೆ ತಮ್ಮದೇ ಆದ ಬಿಓಜಿಗಳನ್ನು ಸ್ಥಾಪಿಸಲು ಸರ್ವಸ್ವತಂತ್ರವಾಗಿರುತ್ತವೆ ಎಂಬುದರ ಸಂಪೂರ್ಣ ಸ್ಪಷ್ಟತೆಯೊಂದಿಗೆ ಅವು ಬಿಓಜಿಗಳ ಸ್ಥಾಪನೆ ಮಾಡುವುದು, ಸಂಯೋಜಿಸುವುದು, ಬಿಓಜಿಗಳ ಅಧಿಕಾರ ಕಾರ್ಯಚಟುವಟಿಕೆಗಳನ್ನು ನಿರ್ಧರಿಸುವುದು, ಅನುಸರಣಾ ಪದ್ಧತಿ, ಬಹಿರಂಗಪಡಿಸುವಿಕೆ, ವರದಿ ಮಾಡುವಿಕೆ, ಮರುಪರಿಶೀಲನೆ ಇವೇ ಮುಂತಾದವುಗಳೂ ಸಹ ಕಾಯಿದೆಯ ಅವಿಭಾಜ್ಯ ಅಂಗವಾಗಿರುತ್ತವೆ.

ಅಗತ್ಯ ಪ್ರಕ್ರಿಯೆಗಳನ್ನು ತ್ವರಿತವಾಗಿ ನೆರವೇರಿಸಲು ಸುಗ್ರೀವಾಜ್ಞೆಯ ಮಾರ್ಗವು ಸರಳವಾಗುವುದಾದರೂ ಈ ವಿಷಯದಲ್ಲಿ ಶಾಸನವನ್ನು ರಚಿಸುವುದು ಬಹಳ ಮುಖ್ಯ.

ಪ್ರಸ್ತಾವಿತ ರಚನೆಗೆ ಹೊಸ ಸ್ವತಂತ್ರ ಸ್ವಾಯತ್ತ ಸಂಸ್ಥೆಗಳ ಸಂಯೋಜನೆ, ಸ್ವತಂತ್ರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರುಗಳ ಆಯ್ಕೆ ಇವೇ ಮುಂತಾದ ವಿವರಗಳ ತಿಳಿವಳಿಕೆಯ ಅಗತ್ಯವಿದೆ. ನಿಯಮಾವಳಿಗಳನ್ನು ರೂಪಿಸಲು ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಭಾಗೀದಾರರ ಸಲಹೆಗಳನ್ನು ಸ್ವಾಗತಿಸಲು ಪ್ರಸ್ತಾವಿತ ಸ್ವರೂಪದ ನೀಲಿನಕ್ಷೆಯ ಸಿದ್ಧತೆ ಮಾಡಿಕೊಳ್ಳುವುದು ಮುಂದಿನ ಪ್ರಮುಖ ಹೆಜ್ಜೆಯಾಗಿದೆ

ಸರ್ಕಾರವು ರಾಜ್ಯದಲ್ಲಿ ಹಾಲಿ ಇರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಈ ರೀತಿಯಾಗಿ ಗುರುತಿಸಿ, ವರ್ಗೀಕರಿಸಬೇಕು – ವಿಧ 1: ಸಂಶೋಧನಾ ಕೇಂದ್ರಿತ ವಿಶ್ವವಿದ್ಯಾಲಯಗಳು (ಆರ್‌ಐಯುಗಳು), ವಿಧ 2: ಬೋಧನಾ ಕೇಂದ್ರಿತ ವಿಶ್ವವಿದ್ಯಾಲಯಗಳು (ಟಿಐಯುಗಳು). ವಿಧ 3: ಸ್ವಾಯತ್ತ ಪದವಿ ಪ್ರದಾನ ಕಾಲೇಜುಗಳು ಮತ್ತು ಎಚ್‌ಇಐಗಳು ರಾಜ್ಯದಾದ್ಯಂತ ಅಗತ್ಯ ಸಂಖ್ಯೆಯಲ್ಲಿವೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಮತ್ತು ಎಸ್‌ಇಜ಼ಡ್‌ಗಳು ಈ ಯೋಜನೆಯ ಪ್ರಮುಖ ಭಾಗವಾಗಿರಬೇಕಾಗುತ್ತದೆ.

## ಕರ್ನಾಟಕದಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಆಡಳಿತ

ಸಾಂಸ್ಥಿಕ ಅಭಿವೃದ್ಧಿ ಯೋಜನೆ (ಐಡಿಪಿ) ಯು ಎಲ್ಲಾ ಎಚ್‌ಇಐಗಳಿಗೆ ಪ್ರಮುಖ ಆಡಳಿತ ಸಂಬಂಧಿ ಚಟುವಟಿಕೆಯಾಗಿದೆ. ಐಡಿಪಿಗಳು ಸಹವರ್ತಿ ಶ್ರೇಣೀಕೃತ ಸ್ವಾಯತ್ತತೆಯೊಂದಿಗೆ ಎಚ್‌ಇಐಗಳ ಶ್ರೇಣೀಕೃತ ಮಾನ್ಯತೆ (ಜಿಎ) ಆಧಾರದ ಮೇಲೆ ರೂಪುಗೊಂಡಿರುತ್ತವೆ. ಎಚ್‌ಇಐಗಳ ಈ ಹಂತ ಹಂತವಾದ ಸಬಲೀಕರಣವು ಎನ್‌ಇಪಿ 2020 ರಲ್ಲಿ ಸೂಚಿಸಿದಂತೆ ಸಂಪೂರ್ಣ ಸ್ವಾಯತ್ತತೆಗೆ ಮಾರ್ಗವಾಗಿದೆ. ಅಂಗೀಕೃತ ಕಾಲೇಜುಗಳ ಹಂತ ಹಂತವಾದ ಸಬಲೀಕರಣ ಯೋಜನೆಯನ್ನು ವಿಶ್ವವಿದ್ಯಾಲಯಗಳು, ಬೋಧಕರ ಸಂಘಟನೆಗಳು ಹಾಗೂ ಎನ್‌ಜಿಓಗಳೊಂದಿಗೆ ಸಮಾಲೋಚಿಸಿ ಅಭಿವೃದ್ಧಿಪಡಿಸತಕ್ಕದ್ದು. ಬಹುತೇಕ ಕಾಲೇಜುಗಳಿಗೆ ಮತ್ತು ಅವುಗಳ ಬಿಓಜಿಗಳಿಗೆ ಮಾನ್ಯತೆಗಾಗಿ ಬೆಂಬಲದ ಅಗತ್ಯವಿರುತ್ತದೆ. ಸ್ವಾಯತ್ತವಾಗುವ ನಿಟ್ಟಿನಲ್ಲಿ ಬಹುಶಿಸ್ತೀಯವಾಗಿ, ದೊಡ್ಡ ಮಟ್ಟದಲ್ಲಿ ಬೆಳೆಯುವ ನಿಟ್ಟಿನಲ್ಲಿ ಪ್ರಯತ್ನಿಸುವ ಕಾಲೇಜು ಬಿಓಜಿಗಳಿಗೆ ಪ್ರೋತ್ಸಾಹಧನ ನೀಡಬೇಕು. ಕೆಎಚ್‌ಇಸಿ ಈ ಸ್ಥಿತ್ಯಂತರದ ಸಂಪೂರ್ಣ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕು. ಕಾಲೇಜು ಸಬಲೀಕರಣದಲ್ಲಿ ಇದು ಒಂದು ಹೊಸ ಕ್ರಾಂತಿಯನ್ನೇ ಪ್ರಾರಂಭಿಸಬೇಕು.

## ಸಮಗ್ರ ಸ್ನಾತಕ ಕೋರ್ಸಿಗೆ ಸ್ಥಿತ್ಯಂತರವಾಗಲು ಪಠ್ಯಕ್ರಮ ಚೌಕಟ್ಟು

ಕೆಎಚ್‌ಇಸಿ ನೇತೃತ್ವದಲ್ಲಿ ನಾಲ್ಕು ವರ್ಷಗಳ ಸ್ನಾತಕ ಕೋರ್ಸಿಗೆ ವಿಶಾಲವಾದ ಪಠ್ಯಕ್ರಮ ಚೌಕಟ್ಟನ್ನು ಸಿದ್ಧಪಡಿಸಬೇಕು. ಸ್ವತಂತ್ರ ಸಂಸ್ಥೆಯು ಕೇಂದ್ರದ ಪಠ್ಯಕ್ರಮವನ್ನು ಅನುಸರಿಸುವುದರಿಂದ ಗುಣಮಟ್ಟ ಹಾಗೂ ಕಲಿಕಾ ಕೌಶಲ್ಯಗಳು ಸಿದ್ಧಿಸುತ್ತವೆ. ವಿದ್ಯಾರ್ಥಿ ಸಮುದಾಯದ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳ ಆಶೋತ್ತರಗಳ ಸಮಗ್ರ ಸರ್ವೇಕ್ಷಣೆಯನ್ನು ನಡೆಸಬೇಕಾಗುತ್ತದೆ. ಎನ್‌ಇಪಿ ಆಧರಿಸಿ (ಹಾಲಿ ಯುಜಿಸಿ ನಿಯಮಗಳನ್ನು ಆಧರಿಸಿ) ರಾಜ್ಯದ ಹಂತದಲ್ಲಿ ವಿಶ್ವವಿದ್ಯಾಲಯಗಳ ಪಠ್ಯಕ್ರಮದ ಸುಧಾರಣೆಯಲ್ಲಿ ವ್ಯಾಪಕವಾದ ಒಮ್ಮತವನ್ನು ಸಾಧಿಸಬಹುದಾಗಿದೆ. ಅಗತ್ಯ ಬದಲಾವಣೆಗಳನ್ನು ತರಲು ಪಠ್ಯಕ್ರಮ ಸುಧಾರಣೆಯನ್ನು ಸಮರೋಪಾದಿಯಲ್ಲಿ ಜಾರಿಗೊಳಿಸಬೇಕಾಗುತ್ತದೆ.

## ಕರ್ನಾಟಕದ ಎಚ್‌ಇಗಳಲ್ಲಿ ಸಂಶೋಧನೆ ಹಾಗೂ ನಾವೀನ್ಯತೆಗಳ ಅಭಿವೃದ್ಧಿ

ರಾಜ್ಯದ ಸಂಶೋಧನಾ ಅಗತ್ಯಗಳನ್ನು ಸಮರ್ಪಕವಾಗಿ ನಿರೂಪಿಸುವ ಹೊಸ ಶಾಸನದ (ಕೆಎಸ್‌ಯು ಕಾಯಿದೆ) ಕರಡು ಮಸೂದೆಯನ್ನು ರಚಿಸಲು ಕರ್ನಾಟಕ ಸರ್ಕಾರ ಮತ್ತು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾರ್ಯಪಡೆಯ ಸದಸ್ಯರುಗಳೊಂದಿಗೆ ಖ್ಯಾತ ಶೈಕ್ಷಣಿಕ ತಜ್ಞರು, ಸಂಶೋಧಕರು, ಶಿಕ್ಷಕರುಗಳ ಒಂದು ಗುಂಪನ್ನು ರಚಿಸಬೇಕಾಗುತ್ತದೆ. ಎಲ್ಲಾ ಎಚ್‌ಇಐಗಳಲ್ಲೂ, ನಿರ್ದಿಷ್ಟವಾಗಿ ಸಂಶೋಧನೆಯು ಇನ್ನೂ ಶೈಶವಾವಸ್ಥೆಯಲ್ಲಿ ಇರುವ ಕಡೆಗಳಲ್ಲಿ ಸಾಂಸ್ಥಿಕ ರೂಪ ಪಡೆಯಬಲ್ಲ ಮಾರ್ಗದರ್ಶಕ ವ್ಯವಸ್ಥೆಯಲ್ಲಿ ಸಂಶೋಧನೆಗೆ ನಾಂದಿ ಹಾಡುವುದು. ಸಂಶೋಧನೆಯನ್ನು ಬೆಳೆಸುವುದು ಮತ್ತು ಸಂಶೋಧನೆಗೆ ಅಗತ್ಯ ಸೌಲಭ್ಯ ಒದಗಿಸಿಕೊಡುವುದು ಕೆಆರ್‌ಐಸಿಯ ಪ್ರಮುಖ ಆಶಯವಾಗಬೇಕಾಗುತ್ತದೆ. ಸದ್ಯಕ್ಕೆ ಸಂಶೋಧನಾ ಚಟುವಟಿಕೆಗಳು ಇಲ್ಲದ ಕಡೆಗಳಲ್ಲಿ ಅಥವಾ ಅತಿ ಸೀಮಿತವಾಗಿರುವ ಕಡೆಗಳಲ್ಲಿ ಸಂಶೋಧನೆಗೆ ಒಂದು ತಕ್ಕ ವಾತಾವರಣ ನಿರ್ಮಿಸುವುದು ಪ್ರಮುಖ ಉದ್ದೇಶವಾಗಿರಬೇಕು. ಸಂಸ್ಥೆಗಳಿಗೆ ಅಗತ್ಯ ಪ್ರೋತ್ಸಾಹ ಒದಗಿಸುವ ಮೂಲಕ ಸಂಸ್ಥೆಗಳ ನೇತೃತ್ವ ವಹಿಸಿ ಅವುಗಳಿಗೆ ಮಾರ್ಗದರ್ಶಕವಾಗಬಲ್ಲ ಕೆಲವು ಉತ್ತಮ ಗುಣಮಟ್ಟದ ಸಂಶೋಧನಾ ಸಂಸ್ಥೆಗಳು ಈಗಾಗಲೇ ಸಾಕಷ್ಟಿವೆ. ಅವು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಬಲ್ಲವುಗಳಾಗಿವೆ. ಇವುಗಳಿಗೆ ಕರ್ನಾಟಕ ಸರ್ಕಾರವು ಬೃಹತ್ ಮಟ್ಟದ ಸಮರ್ಪಕವಾದ ಪ್ರೋತ್ಸಾಹಕಗಳನ್ನು ಒದಗಿಸುವುದರ ಮೂಲಕ ಈ ಉದ್ದೇಶವನ್ನು ಈಡೇರಿಸಿಕೊಳ್ಳಬೇಕಾಗಿದೆ. ಇದಕ್ಕೆ ಕರ್ನಾಟಕ ಸರ್ಕಾರವು ಒಂದು ಬೃಹತ್ ಪ್ರಮಾಣದ ನಿಧಿಯನ್ನು ಮೀಸಲಿಡಬೇಕಾಗುತ್ತದೆ. ಇದು ವಿವಿಧ ಇಲಾಖೆಗಳ ನಿಧಿಗಳ ಕ್ರೋಢೀಕರಣವನ್ನೂ ಒಳಗೊಂಡಿದೆ.

## ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಬೋಧಕರ ಅಭಿವೃದ್ಧಿ

ಬೋಧಕರ ಅಭಿವೃದ್ಧಿಯ ಹೊಣೆಗಾರಿಕೆಯನ್ನು ಕೆಎಸ್‌ಎಚ್‌ಇಸಿ, ಕೆಎಚ್‌ಇಎ, ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ ಮತ್ತು  ವಿಶ್ವವಿದ್ಯಾಲಯಗಳ ಎಚ್‌ಆರ್‌ಡಿ ಕೇಂದ್ರಗಳು ಇವೇ ಮುಂತಾದ ಹಾಲಿ ಇರುವ ಏಜೆನ್ಸಿಗಳ ನಡುವೆ ವಿಂಗಡಿಸಬಹುದಾಗಿದೆ. ಬೋಧಕರ, ನಿರ್ದಿಷ್ಟವಾಗಿ ಹೊಸದಾಗಿ ನೇಮಕಗೊಂಡವರ ಸಾಮರ್ಥ್ಯ ಹೆಚ್ಚಿಸುವುದು ಅಕಾಡೆಮಿಯ ಮೂಲ ಉದ್ದೇಶವಾಗಿರುವ ಕಾರಣ ಈ ನಿಟ್ಟಿನಲ್ಲಿ ಕೆಎಚ್‌ಇಎ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಕೆಎಚ್‌ಇಸಿ ತನ್ನ ಅಧ್ಯಯನದಲ್ಲಿ ಆದ್ಯತೆಯನ್ನು ನಿಗದಿಪಡಿಸಿಕೊಂಡು, ಬೋಧಕರ ಅಭಿವೃದ್ಧಿಗೆ ಅತ್ಯುತ್ತಮವಾದ ವಿಧಾನಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಬೋಧಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದಿನ 3 ರಿಂದ 5 ವರ್ಷಗಳಿಗೆ

ಇದು ಒಂದು ನೀಲಿನಕ್ಷೆ ಸಿದ್ಧಪಡಿಸುತ್ತದೆ, ಬೋಧಕರ ನೇಮಕಾತಿ, ವೃತ್ತಿ ಬೆಳವಣಿಗೆ, ಪರಿಹಾರ ನಿರ್ವಹಣೆ ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಬಿಓಜಿಗಳಿಗೆ ಮಾರ್ಗಸೂತ್ರಗಳನ್ನು ರೂಪಿಸುತ್ತದೆ (ಬೋಧಕರ  ಅಭಿವೃದ್ಧಿ ಸಂಬಂಧಿ ವಿಷಯಗಳು ಪ್ರತಿಯೊಂದು ಐಡಿಪಿಯ ಎಲ್ಲಾ ಮಾರ್ಗದರ್ಶಕ ಹಾಗೂ ಪ್ರಮುಖ ಎಚ್‌ಇಐಗಳ ಭಾಗವಾಗಿರುತ್ತದೆ).

## ಕರ್ನಾಟಕದ ಎಚ್‌ಇನಲ್ಲಿ ಸಮತೆ ಮತ್ತು ಸಮನ್ವಯದ ವಿಷಯದಲ್ಲಿ ಮಧ್ಯಸ್ಥಿಕೆ

ಕರ್ನಾಟಕ ಸರ್ಕಾರವು ಈ ಸಂದರ್ಭದಲ್ಲಿ ಕೆಎಚ್‌ಇಸಿಯೊಂದಿಗೆ ಜೊತೆಗೂಡಿ ಸಾಕಷ್ಟು ಸಂಖ್ಯೆಯ ಎಸ್‌ಇಝಡ್‌ಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಗಮನಹರಿಸಬೇಕು; ಅರ್ಹತಾ ನೋಂದಣಿ ಅನುಪಾತ (ಇಇಆರ್) ನಿರ್ಧಾರಕವಾಗಬಹುದು. ಇದು ವಿದ್ಯಾರ್ಥಿ ವೇತನಗಳನ್ನು ಕ್ರೋಢೀಕರಿಸುವುದರ ಜೊತೆಗೆ ಇನ್ನೂ ಹೆಚ್ಚು ವಿದ್ಯಾರ್ಥಿ ವೇತನಗಳನ್ನು ಪ್ರಾರಂಭಿಸಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡುವುದು ಮೂಲ ಉದ್ದೇಶವಾಗಬೇಕು. ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಎಲ್ಲಾ ಬಗೆಯ ವಿದ್ಯಾರ್ಥಿ ವೇತನಗಳನ್ನು ಒಂದೇ ವೇದಿಕೆಯಲ್ಲಿ ನೀಡುವುದು ಸೂಕ್ತ. ಇದರಿಂದಾಗಿ ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಳ್ಳುವ ಪ್ರಕ್ರಿಯೆ ಸುಲಭವಾಗುತ್ತದೆ ಮತ್ತು ಸಮಾನ ರೀತಿಯದ್ದಾಗುತ್ತದೆ. ಕೆಎಚ್‌ಇಸಿ ಎಲ್ಲಾ ಸೂಕ್ತ ಮಾಹಿತಿಗಳನ್ನು ಒಳಗೊಂಡ ಮಾಹಿತಿ ಕೋಶ (ಡೇಟಾ ಬೇಸ್) ನಿರ್ವಹಿಸಬೇಕು ಮತ್ತು ಡಿಜಿಟಲ್ ಇಂಡಿಯಾ ಕಾರ್ಯಕ್ರಮದೊಂದಿಗೆ ಇದರ ಸಂಪರ್ಕವನ್ನೇರ್ಪಡಿಸಬೇಕು. ಸಿಎಸ್‌ಆರ್ ನಿಧಿಯನ್ನು ಸಮಾನ ಸಮಸ್ಯೆಗಳ ಪರಿಹಾರಕ್ಕೆ ಬಳಸಬೇಕು/ನಿರ್ದೇಶಿಸಬೇಕು. ಕೆಎಚ್‌ಇಸಿ ಮತ್ತು ಕೆಎಚ್‌ಇಆರ್‌ಸಿಗಳು ಸಮನ್ವಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಐಡಿಪಿಯಲ್ಲಿ ಹೇಗೆ ಅಳವಡಿಸಬೇಕು ಎಂಬ ಕುರಿತು ಬಿಓಜಿಗಳಿಗೆ ಮಾರ್ಗಸೂತ್ರಗಳನ್ನು ಒದಗಿಸಬೇಕು. ನೀತಿಯಲ್ಲಿ ಸೂಚಿಸಿರುವಂತೆ ಇದು ಎಚ್‌ಇಐಗಳ ನಿಯಂತ್ರಣಾ ಶಿಷ್ಟಾಚಾರದ ಒಂದು ಅಂಗವಾಗಿ ಪರಿಶೀಲನೆ ಹಾಗೂ ಮಾನ್ಯತೆಯ ಒಂದು ಭಾಗವಾಗಿರುತ್ತದೆ. ಉನ್ನತ ಶಿಕ್ಷಣ ಕ್ಷೇತ್ರದೊಳಗಿನ ಎಲ್ಲಾ ಬಗೆಯ ಪ್ರತ್ಯೇಕ ಅಭ್ಯಾಸಗಳನ್ನು ಇಲ್ಲವಾಗಿಸುವುದು ಗುರಿಯಾಗಬೇಕು.

# VI. ಕರ್ನಾಟಕದಲ್ಲಿ ಎನ್‌ಇಪಿ 2020ರ ಅನುಷ್ಠಾನ – ಪ್ರಮುಖ ಕಾರ್ಯ

1. ಮುಂದಿನ 3 ವರ್ಷಗಳಿಗೆ ತ್ರೈಮಾಸಿಕ ಕ್ಯಾಲೆಂಡರಿನಲ್ಲಿ ನಿಗದಿಪಡಿಸಲಾದ ನಿರ್ದಿಷ್ಟ ಗುರಿಗಳೊಂದಿಗೆ ಅನುಷ್ಠಾನ ಮಿಷನ್ ಸ್ಥಾಪಿಸುವುದು ಮತ್ತು ಪ್ರತಿ ತ್ರೈಮಾಸಿಕದಲ್ಲೂ ಅನುಷ್ಠಾನ ಪ್ರಕ್ರಿಯೆಯನ್ನು ಸಾರ್ವಜನಿಕ ಪರಾಮರ್ಶೆಗೆ ಒಳಪಡಿಸುವುದು– ಅನುಷ್ಠಾನ ಕಾರ್ಯಪಡೆ (ಐಟಿಎಫ್) ಯ ಸ್ಥಾಪನೆ.

2. ಎಸ್‌ಎಸ್‌ಕೆ (ಸಮಗ್ರ ಶಿಕ್ಷಣ)ದಲ್ಲಿ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ (ಕೆಎಸ್‌ಎಚ್‌ಇಸಿ) ನಲ್ಲಿ 'ಅನುಷ್ಠಾನ ನಿಧಿ'ಗೆ ಒಂದು ತತ್‌ಕ್ಷಣದ ಪೂರ್ವಕ ವ್ಯವಸ್ಥೆ ಇರಬೇಕು.

3. ನಿಯಂತ್ರಣಾ ಅಂಗಸಂಸ್ಥೆಗಳ ಸ್ಥಾಪನೆ – ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರ (ಎಸ್‌ಎಸ್‌ಎಸ್‌ಎ) ಮತ್ತು ಕರ್ನಾಟಕ ಉನ್ನತ ಶಿಕ್ಷಣ ನಿಯಂತ್ರಣಾ ಮಂಡಳಿ (ಕೆಎಚ್‌ಇಆರ್‌ಸಿ).

4. ಪ್ರಸ್ತಾಪಿತ ಉನ್ನತ ಶಿಕ್ಷಣ ಸ್ವರೂಪ ಸ್ಥಾಪನೆಗಾಗಿ ಹೊಸ ಕೆಎಸ್‌ಯು ಕಾಯಿದೆ

5. ಶಿಕ್ಷಣ ಇಲಾಖೆಯಲ್ಲಿ ಹಾಲಿ ಇರುವ ಅಂಗಸಂಸ್ಥೆಗಳೊಳಗೆ ಅಧಿಕಾರದ ಪ್ರತ್ಯೇಕತೆ

6. ಸೇವಾ ನಿಯಮಗಳಿಗೆ ತಿದ್ದುಪಡಿಗಳು – ಕೆಪಿಎಸ್/ಶಾಲಾ ಸಂಕೀರ್ಣಗಳಲ್ಲಿ ನಿರ್ದಿಷ್ಟ ಸೇವಾವಧಿ (ಟೆನ್ಯೂರ್‌ಶಿಪ್): ಶಿಕ್ಷಕ ವೃತ್ತಿ ಪ್ರಗತಿಯ ರೇಖಾಚಿತ್ರ ನಿರ್ಮಾಣ ಮತ್ತು ವೃತ್ತಿ ಪ್ರಗತಿಯು ಊರ್ಧ್ವಮುಖಿಯಾಗಿ ಬೆಳೆಯುತ್ತಿರುವುದನ್ನು ಖಾತರಿ ಪಡಿಸುವುದು

7. ರಾಜ್ಯದೊಳಗೆ ಗುರುತಿಸಲಾದ ವಲಯಗಳಲ್ಲಿ ವಿಶೇಷ ಶೈಕ್ಷಣಿಕ ವಲಯಗಳ(ಎಸ್‌ಇಜಡ್‌ಗಳು) ಸ್ಥಾಪನೆ

8. ಸಾಮಾಜಿಕವಾಗಿ – ಆರ್ಥಿಕವಾಗಿ ಅನಾನುಕೂಲಕರ ಸ್ಥಿತಿಯಲ್ಲಿರುವ ಗುಂಪಿನಿಂದ ಬಂದ ವಿದ್ಯಾರ್ಥಿಗಳಿಗೆ ರೂಪಿಸಲಾದ ಇತರೆ ಸಮನ್ವಯ ಶಿಕ್ಷಣ ಉಪಕ್ರಮಗಳ ಜೊತೆಗೆ ಲಿಂಗಾಧಾರಿತ ಮತ್ತು ದಿವ್ಯಾಂಗ ನಿಧಿಯ ಸ್ಥಾಪನೆ.

## ಶಾಲಾ ಶಿಕ್ಷಣ ಕುರಿತಂತೆ

1. ಆರಂಭಿಕ ವರ್ಷಗಳ ಶಾಖೆ ಮತ್ತು ಸಾಕ್ಷರತೆ ಹಾಗೂ ಸಂಖ್ಯಾಜ್ಞಾನ ಶಾಖೆಯ ಸ್ಥಾಪನೆ.

2. ಶಾಲೆಯ ಆರಂಭಿಕ ಹಾಗೂ ಸಿದ್ಧತಾ ಹಂತಗಳಿಗೆ ಡಿಎಸ್‌ಇಆರ್‌ಟಿ ಪಠ್ಯಕ್ರಮ ಹಾಗೂ ಬೋಧನಾ ವಿಧಾನದ ಪರಿಷ್ಕರಣೆ ಮಾಡಬೇಕು. ಎನ್‌ಸಿಎಫ್ 2021 ಬಿಡುಗಡೆಯಾದ ಮೇಲೆ ಮಾಧ್ಯಮಿಕ ಹಾಗೂ ಪ್ರೌಢ ಹಂತದ ಪಠ್ಯ ಕ್ರಮದ ಪರಿಷ್ಕರಣೆ ಕೈಗೆತ್ತಿಕೊಳ್ಳಬಹುದು.

3. ಯಶಸ್ವೀ ಶಾಲೆಗಳನ್ನು ಗುರುತಿಸುವುದು. ನಿರ್ದಿಷ್ಟವಾಗಿ ಕೆಪಿಎಸ್ ಮತ್ತು ಇತರೆ ವಿಶೇಷ ಶಾಲೆಗಳನ್ನು ಗುರುತಿಸಿ ಅವನ್ನು ಶಾಲಾ ಸಂಕೀರ್ಣ ಕೇಂದ್ರಗಳಿಗೆ ನಿರ್ಮಿಸುವುದು.

4. ಗುರು ಚೇತನವನ್ನು ಮತ್ತಷ್ಟು ಬಲಗೊಳಿಸುವುದು. ಅದನ್ನು ರಾಜ್ಯದಲ್ಲಿ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ವಿಶಿಷ್ಟ ವೇದಿಕೆಯನ್ನಾಗಿ ಮಾಡುವುದು.

## ಉನ್ನತ ಶಿಕ್ಷಣ ಕುರಿತಂತೆ

1. ಎಚ್‌ಇಐಗಳೊಳಗೆ ಬಿಓಜಿಗಳ ಸ್ಥಾಪನೆ. ಇವು ಮಾರ್ಗದರ್ಶಕ ಸಂಸ್ಥೆಗಳಾಗಿ ಬೆಳೆಯಲು ಪ್ರಾರಂಭದಲ್ಲಿ ಕೆಎಸ್‌ಎಚ್‌ಇಸಿ ನೇತೃತ್ವವಹಿಸಿ ಮುನ್ನಡೆಸಬೇಕು. ತರುವಾಯ ಇವು ಇತರ ಎಚ್‌ಇಐಗಳನ್ನು ಮುನ್ನಡೆಸಬಲ್ಲ ಮಾರ್ಗದರ್ಶಕ ಸಂಸ್ಥೆಗಳಾಗಬಲ್ಲವು.

2. ಮಾರ್ಗದರ್ಶಕ ಸಂಸ್ಥೆಗಳನ್ನು ಗುರುತಿಸಿ ಕಾರ್ಯಾಗಾರಗಳನ್ನು ನಡೆಸುವುದರ ಮೂಲಕ, ನೀತಿಯ ತತ್ವಗಳ ಪಾಲನೆಯಾಗುತ್ತಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

3. ಎಲ್ಲಾ ಎಚ್‌ಇಐಗಳೂ ಐಡಿಪಿಗಳನ್ನು ಅಭಿವೃದ್ಧಿಪಡಿಸಬೇಕು. ಪ್ರಾರಂಭದಲ್ಲಿ ಕೆಎಸ್‌ಎಚ್‌ಇಸಿ ಮತ್ತು ಮಾರ್ಗದರ್ಶಕ ಸಂಸ್ಥೆಗಳು ಇವುಗಳಿಗೆ ಮಾರ್ಗದರ್ಶನ ನೀಡಬೇಕು.

# VII. ಸಮಾರೋಪ ಮತ್ತು ಮುಂದಿನ ಹೆಜ್ಜೆ

ಅನುಷ್ಠಾನ ಯೋಜನೆಯು ನೀತಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಎಲ್ಲಾ ವಿವರಗಳನ್ನೂ ಒಳಗೊಂಡಿಲ್ಲ. ಶಿಕ್ಷಣದ ಎಲ್ಲಾ ಭಾಗೀದಾರರ ನಡುವೆ ನಡೆಯುವ ಸಮಾಲೋಚನಾ ಪ್ರಕ್ರಿಯೆಯ ಮೂಲಕ ಆ ವಿವರಗಳು ವಿಕಾಸವಾಗಬೇಕಾಗುತ್ತದೆ.

ವಿವರವಾದ ಯೋಜನೆಯು ಪ್ರತಿ ಹಂತಕ್ಕೆ ಅನ್ವಯವಾಗುವ ವಿಸ್ತೃತ ತ್ರೈಮಾಸಿಕ ಯೋಜನೆಯೊಂದಿಗೆ ಹಂತ ಹಂತವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೇಂದ್ರೀಕೃತವಾಗಿರಬೇಕು.

- ಹಂತ 1 – 2023ಕ್ಕೆ ಗುರಿಗಳು; 2020 ನ್ನು 'ಶೂನ್ಯ ವರ್ಷ' ಎಂದು ಪ್ರಾರಂಭಿಸುವುದು.
- ಹಂತ 2 – 2025ಕ್ಕೆ ಗುರಿಗಳು
- ಹಂತ 3 – ಮುಂದಿನ 10 ವರ್ಷಗಳಿಗೆ, ಅಂದರೆ 2030ಕ್ಕೆ ಗುರಿಗಳು

ಯಾವುದು ಅತಿಮುಖ್ಯ ಎಂಬುದರ ಆಧಾರದ ಮೇಲೆ ಕಾರ್ಯಯೋಜನೆಯ ಆದ್ಯತೆಯನ್ನು ರೂಪಿಸಬಹುದಾಗಿದೆ. ಇದನ್ನು ಹಣಕಾಸಿನ ಮುಗ್ಗಟ್ಟಿಲ್ಲದ ಮಾರ್ಗದಲ್ಲಿ ಅಂದರೆ ಅಗತ್ಯವಿರುವ ಶಾಸನಾತ್ಮಕ ಕ್ರಿಯೆಯ ಮೂಲಕ ನೆರವೇರಿಸಬಹುದಾಗಿದೆ.

ಕರ್ನಾಟಕ ಸರ್ಕಾರ ಸ್ಥಾಪಿಸಿದ ಅನುಷ್ಠಾನ ಕಾರ್ಯಪಡೆ (ಐಟಿಎಫ್)ಯು ಅನುಷ್ಠಾನದ ನಿರಂತರತೆಯನ್ನು ಖಾತರಿಪಡಿಸುತ್ತದೆ.